ಓ.ಎಸ್. 439/2017
ಪಿ.ಡಬ್ಲ್ಯೂಃ-2

ದಿನಾಂಕಃ **16.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್.ಆರ್. ವಕೀಲರಿಂದಃ</u>

ನಾನು ಪಿಯುಸಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ವಾದಿ ನರಸೇಗೌಡರವರ ಅಳಿಯ ಎಂದರೆ ಸರಿ. ನಾನು ತೊಂಡೋಟಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ತೊಂಡೋಟಿ ಗ್ರಾಮದಲ್ಲಿಯೇ ಹುಟ್ಟಿ ಬೆಳೆದಿರುತ್ತೇನೆ. ನಾನು ಬೆಂಗಳೂರಿಗೆ ಹೋಗಿ ಬರುತ್ತಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಬೆಂಗಳೂರಿನಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡುತ್ತೇನೆ. ದಾವಾ ಸರ್ವೆ ನಂ. 149/14 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 149 ರಲ್ಲಿ ಎಷ್ಟು ಪೋಡಿಗಳಾಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡುವಾಗ ನಾನು ಹಾಜರಿದ್ದೆ. ಸದರಿ ದಿನದಂದು ವಾದಿ ಎರಡು ಜಮೀನುಗಳನ್ನು ಖರೀದಿ ಮಾಡಿರುತ್ತಾರೆ. ಸದರಿ ದಿನದಂದು ವಾದಿ ಸರ್ವೆ ನಂ. 149/14 ರಲ್ಲಿ 8 ಗುಂಟೆ ಮತ್ತು ಸರ್ವೆ ನಂ. 149/13 ರಲ್ಲಿ ಜಮೀನನ್ನು ಖರೀದಿ ಮಾಡಿರುತ್ತಾರೆ, ಆದರೆ ಸರ್ವೆ ನಂ. 149/13 ರಲ್ಲಿ ಎಷ್ಟು ಜಮೀನನ್ನು ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

**2.** ಸರ್ವೆ ನಂ. 149/13 ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿರುತ್ತದೆ. ಸರ್ವೆ ನಂ. 149 ರಲ್ಲಿ ಒಟ್ಟು 11 ಪೋಡಿ ಮಾತ್ರ ಆಗಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 149/13 ಮತ್ತು ಸರ್ವೆ ನಂ. 149/14 ಅಸ್ತಿತ್ವದಲ್ಲಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ನಾನು, ವಾದಿ ಮತ್ತು ಪ್ರಾಸಾ-3 ರವರು ಶಾಮೀಲಾಗಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ . ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**3.** ದಾವಾ ಸ್ವತ್ತಿನ ಅಕ್ಕ-ಪಕ್ಕದಲ್ಲಿ ನನಗೆ ಯಾವುದೇ ಜಮೀನು ಇರುವುದಿಲ್ಲ. ಸರ್ವೆ ನಂ. 149/14 ಭೋವಿ ಕಾಲೋನಿಗೆ ಸೇರಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ದನದ ಕೊಟ್ಟಿಗೆ ಹಾಕಲು ಬಂದಿದ್ದರಿಂದ ಈ ದಾವೆಯನ್ನು ಹೂಡಿರುತ್ತಾರೆ. ಸರ್ವೆ ನಂ. 149 ರಲ್ಲಿನ ಸಂಪೂರ್ಣ ಜಮೀನು ಭೋವಿ ಕಾಲೋನಿಗೆ ಸೇರಿದದಿ ಜಮೀನಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

**4.** ದಾವಾ ಸ್ವತ್ತಿನ ಪೂರ್ವಕ್ಕೆ-ಹನುಮಂತಪ್ಪನವರ ಜಮೀನು, ಪಶ್ಚಿಮಕ್ಕೆ-ಲಕ್ಷ್ಮೀನರಸಪ್ಪನವರ ಜಮೀನು, ಉತ್ತರಕ್ಕೆ -ಗಂಗಾಧರಯ್ಯ, ದಕ್ಷಿಣಕ್ಕೆ- ಲಕ್ಷ್ಮೀನರಸಮ್ಮನವರ ಜಮೀನು ಇರುತ್ತದೆ. ಸದರಿ ಚಕ್ಕುಬಂಧಿಯ ಮದ್ಯೆ ಇರುವಂತಹ ಆಸ್ತಿ ಅಸ್ಥಿತ್ವದಲ್ಲಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**5.** ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ವಾದಿ ನನ್ನ ಮಾವ ಆಗಿರುವ ಕಾರಣ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ